# ಕವಿ ಚೆನ್ನವೀರ ಕಣವಿಯವರ
# (28 ಜೂನ್ 1928 – 16 ಫೆಬ್ರುವರಿ 2022)
# ಬದುಕು, ವ್ಯಕ್ತಿತ್ವ ಮತ್ತು ಸಾಹಿತ್ಯದ ಅವಲೋಕನ.

ಕನ್ನಡ ಕುಟುಂಬದ ಹಿರಿಯರಂತಿದ್ದ ಚೆನ್ನವೀರ ಕಣವಿಯವರ ವ್ಯಕ್ತಿತ್ವದ ದರ್ಶನ ನನಗಾದ ಪ್ರಸಂಗವೊಂದು ನೆನಪಾಗುತ್ತಿದೆ: ಜಿ.ಎಸ್. ಶಿವರುದ್ರಪ್ಪನವರು ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದ ಸಂದರ್ಭ. ಅವರನ್ನು ನೋಡಲೆಂದು ಕಣವಿಯವರು ಅವರ ಮನೆಗೆ ಬಂದಿದ್ದರು. ಪ್ರಾಸಂಗಿಕವಾಗಿ ಮಾತನಾಡುತ್ತಿದ್ದಾಗ ಇಬ್ಬರಿಗೂ ಆಪ್ತವಲಯದಲ್ಲಿದ್ದ ಕಿರಿಯ ಗೆಳೆಯರೊಬ್ಬರ ಅಭಿನಂದನಾ ಗ್ರಂಥದ ಪ್ರಸ್ತಾಪ ಬಂದಿದೆ. ಅವರ ಬಗ್ಗೆ ಬರೆದ ಸಾನೆಟ್ಟೊಂದನ್ನು ಜೇಬಿನಿಂದ ತೆಗೆದು ಕಣವಿಯವರು ಓದಿದ್ದಾರೆ. ಆಗ ಶಿವರುದ್ರಪ್ಪನವರು, 'ನಾನೂ ಬರೆಯಬೇಕಿತ್ತು, ಈ ಅನಾರೋಗ್ಯದಿಂದ ಸಾಧ್ಯವಾಗುತ್ತಿಲ್ಲ' ಎಂದು ಪೇಚಾಡಿಕೊಂಡಿದ್ದಾರೆ. ತಕ್ಷಣ ಕಣವಿಯವರು, 'ನೀವು ಹೇಳಿ, ನಾನು ಬರೆದುಕೊಳ್ಳುತ್ತೇನೆ' ಎಂದು ಹೇಳಿ ಪೆನ್ನು ಪೇಪರ್ ತೆಗೆದುಕೊಂಡು ಸಿದ್ಧವಾದರು. ಶಿವರುದ್ರಪ್ಪನವರು ನಸುನಕ್ಕು, 'ಡಿಕ್ಟೇಷನ್ ತೆಗೆದುಕೊಳ್ಳುತ್ತೀರಾ' ಎನ್ನುತ್ತಾ ತಾವು ಹೇಳಬೇಕಾದ ಮಾತುಗಳನ್ನು ಹೇಳಿದಾಗ, ಕಣವಿಯವರು ಅದನ್ನು ಬರೆದುಕೊಂಡು ಸಂಬಂಧಪಟ್ಟ ಕಿರಿಯರಿಗೆ, 'ಶಿವರುದ್ರಪ್ಪನವರು ಅನಾರೋಗ್ಯದಲ್ಲಿಯೂ ನಿಮ್ಮ ಬಗ್ಗೆ ಬರೆಯಲೇಬೇಕೆಂದು, ಹೇಳಿ ಬರೆಸಿದ್ದಾರೆ' ಎಂದು ಅದನ್ನು ಅವರಿಗೆ ತಲುಪಿಸಿದರು. ದಶಕದ ಹಿಂದಿನ ಆಗ ಎಂಬತ್ತರ ವಯೋಮಾನದಲ್ಲಿದ್ದ ಈ ಹಿರಿಯರಿಬ್ಬರ ನಡವಳಿಕೆ ಕನ್ನಡ ಸಂಸ್ಕೃತಿಯ ಬಗ್ಗೆ ಅನೇಕ ಸಂಗತಿಗಳನ್ನು ಹೇಳುವಂತಹ ಒಂದು ರೂಪಕದಂತೆ ನನಗೆ ಈಗ ತೋರುತ್ತಿದೆ.

ಕಣವಿಯವರೊಡನೆ ನನಗೆ ನಾಲ್ಕು ದಶಕಗಳ ನಿಕಟ ಒಡನಾಟ. ನಾನು ಕಂಡ ಅತ್ಯಂತ ಸುಸಂಸ್ಕೃತ ವ್ಯಕ್ತಿಗಳಲ್ಲಿ ಕಣವಿಯವರು ಮೇಲುಸಾಲಿನಲ್ಲಿದ್ದಾರೆ. ಧಾರವಾಡಕ್ಕೆ ಹೋದಾಗ ಕಣವಿಯವರನ್ನು ಕಾಣದೆ ಬಂದದ್ದು ನೆನಪಿಲ್ಲ. ಕುಟುಂಬವತ್ಸಲರಾದ ಕಣವಿ ಮತ್ತು ಶಾಂತಕ್ಕ(ಶಾಂತಾದೇವಿ ಕಣವಿ) ಹಾಗೂ ಅವರ ಕುಟುಂಬ ವರ್ಗ ನನ್ನನ್ನೂ, ರಜನಿಯವರನ್ನೂ ಮನೆಯವರಂತೆಯೇ ಆಪ್ತವಾಗಿ ನಡೆಸಿಕೊಂಡಿದ್ದಾರೆ. ಕಣವಿಯವರದು ಸೃಜನಶೀಲ ಪ್ರತಿಭಾವಂತ ಕುಟುಂಬ. ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕುಟುಂಬ ಸದಸ್ಯರು ಮಾಡಿರುವ ಸಾಧನೆ ಗಮನಿಸುವಂಥದು. ಅಂತಹ ಪರಿಸರವನ್ನು ಕಣವಿ ದಂಪತಿ ತಮ್ಮ ವ್ಯಕ್ತಿತ್ವದ ಪ್ರಭಾವಳಿಯಿಂದಲೇ ಸೃಷ್ಟಿಸಿದ್ದರು. ತಮ್ಮ ಬದುಕು–ಬರಹಗಳ ಮೂಲಕ ಸಾಮಾಜಿಕ ಬದುಕಿಗೆ ಒಂದು ಘನತೆಯನ್ನು ತಂದುಕೊಟ್ಟಿದ್ದ ಕಣವಿಯವರು ಕನ್ನಡ ಸಂಸ್ಕೃತಿಗೆ ಕೆಲವು ಗುಣಾತ್ಮಕ ಅಂಶಗಳನ್ನು ಸೇರಿಸಿ, ಸಂಘರ್ಷದ ನಮ್ಮ ಪರಿಸರದಲ್ಲಿ ಸಹಬಾಳ್ವೆಯ ಪರಿಕಲ್ಪನೆ ಹಾಗೂ ಮಾನವೀಯ ಸಂಬಂಧಗಳ ಮಹತ್ವವನ್ನು ನಮಗೆ ಮನಗಾಣಿಸಿದವರು. ಇಂತಹ ಅನೇಕ ಹಿರಿಯರ ಕಣ್ಮರೆಯಿಂದ ಧಾರವಾಡ ಬಡವಾದಂತೆ ತೋರುತ್ತಿದೆ.

ಕಣವಿಯವರದು ಮೃದುಮಾತು. 'ಸಲೆ ಮೆಲ್ಪು ಬಲ್ಪನಳಿಗುಂ' ಎಂಬ ಪಂಪನ ಮಾತುಗಳಲ್ಲಿ ಅವರಿಗೆ ತುಂಬು ವಿಶ್ವಾಸ. ಅದೇ ಭಾವದ 'ಮೃದುವಚನ ಮೂಲೋಕ ಗೆಲ್ಲುವುದು ತಿಳಿಯ' ಎಂಬ ಮಾತುಗಳನ್ನು ಕಣವಿಯವರಲ್ಲೂ ನಾವು ಕಾಣಬಹುದು. ಆದರೆ, ಮೃದುಮಾತಿನ ಅವರ